ಸಾರ್ವಜನಿಕ ಶಿಕ್ಷಣ ಇಲಾಖೆ ಕರ್ನಾಟಕ ಸರ್ಕಾರ ಸರ್ವ ಶಿಕ್ಷಣ ಅಭಿಯಾನ

ಡಿಸೆಂಬರ್ 2009


# ಚಿಣ್ಣರ ಚೇತನ

ಓ ನನ್ನ ಚೇತನಾ ಆಗು ನೀ ಅನಿಕೇತನ

ಕೃಷ್ಣದೇವ ರಾಯ–500 ವಿಶೇಷ ಸಂಚಿಕೆ

## ಹಂಪಿ

ಹಂಪಿ ತುಂಗಭದ್ರಾ ನದಿಯ ದಕ್ಷಿಣ ದಂಡೆಯ ಮೇಲಿರುವ ಊರು. ಪವಿತ್ರ ಯಾತ್ರಾಸ್ಥಳ. ಸಹಸ್ರಾರು ವರ್ಷಗಳ ಹಿಂದೆ ನವಶಿಲಾಯುಗದ ಜನ ವಾಸ ಮಾಡುತ್ತಿದ್ದ ತಾಣ. ರಾಮಾಯಣದಲ್ಲಿ ಬರುವ ಕಿಷ್ಕಿಂದೆಯೂ ಇದೇ ಎಂಬ ನಂಬಿಕೆಯಿದೆ. ಇಲ್ಲಿನ ವಾಲಿ ದಿಬ್ಬ, ಶಬರಿ ಗುಹೆ, ಸೀತೆ ಸೆರಗು, ಸುಗ್ರೀವ ಗುಹೆಗಳು ಈ ನಂಬಿಕೆಗೆ ಪೂರಕವಾಗಿವೆ. 350 ಚದರ ಕಿಲೋಮೀಟರ್ ವಿಸ್ತಾರವಾಗಿದ್ದ ಈ ರಾಜಧಾನಿ ಏಳು ಸುತ್ತಿನ ಕೋಟೆಯಿಂದ ಸುತ್ತುವರಿದಿತ್ತು. ಅಗಲವಾದ ಬೀದಿಗಳು, ಬಹುಮಹಡಿ ಅಂಗಡಿಸಾಲುಗಳು, ಬೃಹದಾಕಾರದ ದೇವಾಲಯಗಳು ಇಲ್ಲಿದ್ದವು. ವಜ್ರ, ಕೆಂಪು, ಪಚ್ಚೆ, ಮುತ್ತುಗಳನ್ನು ರಸ್ತೆಬದಿ ರಾಶಿ ಹಾಕಿಕೊಂಡು ಮಾರುತ್ತಿದ್ದಂಥ ವೈಭವದ ಊರಿದು.



## ವೈಭವದ ಸ್ಮರಣೆ

ವಿಜಯನಗರ ಸಾಮ್ರಾಜ್ಯದ ಅಂದಿನ ವೈಭವವನ್ನು 500 ವರ್ಷಗಳ ನಂತರ ಕರ್ನಾಟಕ ಸರ್ಕಾರ ವಿವಿಧ ಕಾರ್ಯಕ್ರಮಗಳ ಮುಖಾಂತರ ನೆನಪಿಸಿಕೊಳ್ಳುತ್ತಿದೆ.

ಕಾರ್ಯಕ್ರಮದ ಮುಖ್ಯಾಂಶಗಳು ಹೀಗಿವೆ:

■ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಸುಮಾರು 30,000 ಮಕ್ಕಳ ಹಂಪಿ ಭೇಟಿ. ■ ರಾಜ್ಯಾದ್ಯಂತ ಶಾಲೆ/ಕಾಲೇಜುಗಳಲ್ಲಿ ವಿಜಯನಗರ ಸಾಮ್ರಾಜ್ಯ ಕುರಿತಂತೆ ಸ್ಪರ್ಧೆ, ಸಾಂಸ್ಕೃತಿಕ ಕಾರ್ಯಕ್ರಮ, ವಿಚಾರ ಸಂಕಿರಣ ಆಯೋಜನೆ. ■ ಜನವರಿ 27, 28 ಮತ್ತು 29 ರಂದು ಹಂಪಿಯಲ್ಲಿ ವಿಶೇಷ ಕಾರ್ಯಕ್ರಮ – ಶ್ರೀ ಕೃಷ್ಣದೇವರಾಯ ಪಟ್ಟಾಭಿಷೇಕದ 500ನೇ ವರ್ಷಾಚರಣೆ.

ಆ ಸುವರ್ಣಯುಗದ ಬಗ್ಗೆ ಹೆಚ್ಚಿನ ಮಾಹಿತಿ ನೀಡಲು ಕರ್ನಾಟಕ ಸರಕಾರ ವೆಬ್‌ಸೈಟೊಂದನ್ನು ಇತ್ತೀಚೆಗೆ ಆರಂಭಿಸಿದೆ. ಕುತೂಹಲವಿದ್ದರೆ ಈ ಕೆಳಗಿನ ವಿಳಾಸಕ್ಕೆ ಹೋಗಿ ಓದಿ. www.krishnadevaraya.in



## ದಾಸರಿದ್ದ ಕಾಲ

ನಮಗೆ ಚೆನ್ನಾಗಿ ಗೊತ್ತಿರುವ ಪುರಂದರ ದಾಸರು, ಕನಕದಾಸರು, ವಾದಿರಾಜರು, ಕೃಷ್ಣದೇವ ರಾಯನ ಕಾಲದವರೇ. ಅವರ ಸಾಮ್ರಾಜ್ಯದಲ್ಲಿದ್ದ ರಾಯರ ರಾಜಗುರುಗಳು ಕನ್ನಡಿಗರೇ. ಅವರೇ ಶ್ರೀ ವ್ಯಾಸರಾಯರು. ರಾಯರಿಗೆ ಬಂದಿದ್ದ 'ಕುಹು ಯೋಗ'ವನ್ನು ನಿವಾರಣೆ ಮಾಡಿದವರು ವ್ಯಾಸರಾಯರು. ವಿಜಯ ವಿಠ್ಠಲ ದೇವಸ್ಥಾನದ ಹಿಂದಿರುವ ಕಲ್ಲು ಮಂಟಪದಲ್ಲಿ ಪುರಂದರದಾಸರು ಹಾಡುತ್ತಿದ್ದರಂತೆ. ಅದಕ್ಕೇ ಪುರಂದರ ಮಂಟಪ ಎಂಬ ಹೆಸರು ಬಂದಿದೆ.



ವಿಜಯನಗರ ಸಾಮ್ರಾಜ್ಯದ ಮಹಾನ್ ಸಾಮ್ರಾಟ ಶ್ರೀಕೃಷ್ಣದೇವರಾಯ. ಆತನ ಕಾಲದಲ್ಲಿ ವಿಜಯನಗರದ ವೈಭವ – ಹಿರಿಮೆ ಇಡೀ ಜಗತ್ತಿಗೇ ಹರಡಿತು.

ಕೃಷ್ಣದೇವರಾಯ ಜನಿಸಿದ್ದು ಕ್ರಿ.ಶ. 1417ರ ಜನವರಿ 17ರಂದು. ಪಟ್ಟಕ್ಕೆ ಬಂದದ್ದು 1510ರ ಜನವರಿ 24ರಂದು. ಅಂದರೆ ಈ ತಿಂಗಳ ಜನವರಿ 24ಕ್ಕೆ ಆತನ ಪಟ್ಟಾಭಿಷೇಕವಾಗಿ 500 ವರ್ಷಗಳಾಗುತ್ತವೆ. ಕರ್ನಾಟಕ ರಾಜ್ಯ ಸರ್ಕಾರ ಆ ದಿನವನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಿದೆ.

ತಾನು ರಾಜ್ಯವಾಳಿದ 21 ವರ್ಷಗಳಲ್ಲಿ 14 ಯುದ್ಧ ಮಾಡಿದ ಕೃಷ್ಣದೇವರಾಯ ಅಷ್ಟೂ ಯುದ್ಧಗಳನ್ನು ಗೆದ್ದ. ಸಾಹಿತ್ಯ, ಸಂಗೀತ, ನೃತ್ಯ ಶಿಕ್ಷಣ ಪಡೆದಿದ್ದ ಕೃಷ್ಣದೇವರಾಯ ಕನ್ನಡ, ಸಂಸ್ಕೃತ, ತೆಲುಗು, ತುಳು ಭಾಷೆಗಳಲ್ಲಿ ಸಾಹಿತ್ಯ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಿದ. ಸ್ವತಃ 'ಜಾಂಬವತಿ ಪರಿಣಯ' ಎಂಬ ನಾಟಕವನ್ನೂ ಹಾಗೂ 'ಆಮುಕ್ತಮಾಲ್ಯದ' ಎಂಬ ಬೃಹತ್‌ಕಾವ್ಯವನ್ನೂ ರಚಿಸಿದ.

ನೀರಾವರಿಗೆ ಮಹತ್ವ ನೀಡಿದ ಕೃಷ್ಣದೇವರಾಯ ಕಾಲುವೆಗಳನ್ನು ತೋಡಿಸಿ ಅದ್ಭುತ ಇಂಜಿನಿಯರಿಂಗ್ ಪ್ರತಿಭೆ ಮೆರೆದಿದ್ದಾನೆ. ವಲ್ಲಭಪುರದ ಅಣೆಕಟ್ಟು, ಬಸವಣ್ಣನ ಕಾಲುವೆ ಹಾಗೂ ಕೆರೆಗಳನ್ನು ಕಟ್ಟಿಸಿದ್ದು ಆತನೇ.

ಕಲೆ, ವ್ಯಾಪಾರ, ರಾಜ್ಯ ವಿಸ್ತಾರಗಳಿಗೆ ಹೆಚ್ಚಿನ ಗಮನ ನೀಡಿದ ಆತನ ಕಾಲದಲ್ಲಿ ಅನೇಕ ವಿದೇಶಿ ಪ್ರವಾಸಿಗರು ರಾಜ್ಯಕ್ಕೆ ಭೇಟಿ ನೀಡಿ ಸಾಮ್ರಾಜ್ಯವನ್ನು ಕುರಿತು ಗ್ರಂಥಗಳನ್ನು ರಚಿಸಿದ್ದಾರೆ. 'ವಿಜಯನಗರ ಸಾಮ್ರಾಜ್ಯದಲ್ಲಿ ಎಲ್ಲ ಮತದವರು ತಮ್ಮ ನಂಬಿಕೆಗಳಿಗನುಸಾರ ಬದುಕಬಹುದು' ಎಂದು ಪೋರ್ಚುಗೀಸ್ ಅಧಿಕಾರಿ ದು–ಅರ್ತೆ ಬಾರ್ಬೋಸ ಎಂಬಾತ ಬಣ್ಣಿಸಿದ್ದಾನೆ. ಶ್ರೀಕೃಷ್ಣದೇವರಾಯ ಅಶೋಕ, ಸಮುದ್ರಗುಪ್ತ, ಹರ್ಷ, ಪುಲಿಕೇಶಿಯರ ಸಾಲಿನಲ್ಲಿ ನಿಲ್ಲುವ ದೊರೆ.

# ಶ್ರೀಕೃಷ್ಣದೇವರಾಯ

**ಸಾಹಿತ್ಯ ಸಮರಾಂಗಣ ಸಾಮ್ರಾಟ ಶ್ರೀಕೃಷ್ಣದೇವರಾಯ ಸಿಂಹಾಸನವನ್ನೇರಿ ಸರಿಯಾಗಿ 500 ವರ್ಷ ಕಳೆದಿವೆ**

> 'ಇಂಥ ನಗರವನ್ನು ಕಣ್ಣಿದ್ದವರು ನೋಡಿರಲಾರರು. ಕಿವಿಯಿದ್ದವರು ಕೇಳಿರಲಾರರು. ಇದು ರೋಮ್ ಸಾಮ್ರಾಜ್ಯಕ್ಕಿಂತ ಬಹು ದೊಡ್ಡದು.
>
> ಅಬ್ದುಲ್ ರಜಾಕ್
> ಪರ್ಷಿಯಾ ರಾಯಭಾರಿ

## ವಿದ್ಯಾರಣ್ಯರು ತೋರಿದ ಹಾದಿ

ಭಾರತದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಒಂದು ಐತಿಹಾಸಿಕ ಘಟನೆ. 13ನೇ ಮತ್ತು 14ನೇ ಶತಮಾನದಲ್ಲಿ ದೆಹಲಿಯ ಸುಲ್ತಾನರಾದ ಅಲ್ಲಾ ಉದ್ ದೀನ್ ಖಿಲ್ಜಿ ಮತ್ತು ಮಹಮದ್ ಬಿನ್ ತೊಘಲಕ್‌ರು ದಕ್ಷಿಣಭಾರತದ ಮೇಲೆ ದಾಳಿ ನಡೆಸಿದರು. ಅನೇಕರು ಪ್ರಾಣ ತೆತ್ತರು, ಮಠ ದೇಗುಲಗಳು ಲೂಟಿಗೊಳಗಾದವು. ಆಗ ಹಿಂದೂ ಧರ್ಮ –ಸಂಸ್ಕೃತಿಗಳ ರಕ್ಷಣೆಗಾಗಿ ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ಹರಿಹರರಾಯ(ಹುಕ್ಕ) ಮತ್ತು ಬುಕ್ಕರಾಯ(ಬುಕ್ಕ) ಎಂಬುವರು ಹಂಪಿಯಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದರು. ಇದು ಆಗಿದ್ದು ಕ್ರಿ.ಶ. 1336ರಲ್ಲಿ.

ಸಾಮ್ರಾಜ್ಯ ಸ್ಥಾಪನೆ ಕುರಿತು ಕುತೂಹಲಕಾರಿ ಕತೆಯೊಂದಿದೆ. ಒಮ್ಮೆ ಬೇಟೆ ನಾಯಿಯೊಂದು ಮೊಲವನ್ನು ಅಟ್ಟಿಸಿಕೊಂಡು ಹೋಗುತ್ತಿದ್ದುದನ್ನು ವಿದ್ಯಾರಣ್ಯರು ಕಂಡರಂತೆ. ಒಂದು ಸ್ಥಳದಲ್ಲಿ ಇದ್ದಕ್ಕಿದಂತೆ ತಿರುಗಿ ನಿಂತ ಮೊಲ ನಾಯಿಯನ್ನೇ ಹೆದರಿಸಿ ಹಿಮ್ಮೆಟ್ಟುವಂತೆ ಮಾಡಿತಂತೆ. ಹಿಂದೆ ಸುಗ್ರೀವ ತನಗಿಂತ ಬಲಶಾಲಿಯಾಗಿದ್ದ ವಾಲಿಯನ್ನು ಎದುರಿಸುವ ಧೈರ್ಯ ತೋರಿದ್ದು ಅಲ್ಲಿಯೇ ಎಂಬ ವಿಷಯ ವಿದ್ಯಾರಣ್ಯರಿಗೆ ನಂತರ ತಿಳಿಯಿತು. ಎಂಥ ಬಲಶಾಲಿ ಶತ್ರುವನ್ನೂ ಹಿಮ್ಮೆಟ್ಟಿಸುವಂಥ ಧೈರ್ಯ ಆ ಸ್ಥಳದಲ್ಲಿ ಹುಟ್ಟುತ್ತದೆ ಎಂದು ಮನಗಂಡ ಅವರು ಅಲ್ಲಿಯೇ ಸಾಮ್ರಾಜ್ಯ ಸ್ಥಾಪಿಸಲು ಸೂಚಿಸಿದರು.



## ಲಾಂಛನ



ವಿಜಯನಗರ ದೊರೆಗಳ ರಾಜ ಚಿಹ್ನೆ ಏನು ಗೊತ್ತೆ? ವರಾಹ! ವರಾಹ ಅಂದರೆ ಹಂದಿ. ಅದನ್ನೇಕೆ ರಾಜ ಚಿಹ್ನೆ ಮಾಡಿದರು? ವಿಷ್ಣುವಿನ ದಶಾವತಾರಗಳಲ್ಲಿ ವರಾಹಾವತಾರ ಮೂರನೆಯದು. ಭೂಮಿತಾಯಿಯನ್ನು ಹಿರಣ್ಯಾಕ್ಷನೆಂಬ ರಾಕ್ಷಸನಿಂದ ಬಿಡುಗಡೆ ಮಾಡಲು ವಿಷ್ಣು ತಳೆದ ಅವತಾರವಿದು. ಹಾಗೇ ದೇಶವನ್ನು ಯವನರೆಂಬ ಶತ್ರುಗಳಿಂದ ಬಿಡುಗಡೆ ಮಾಡುವುದರ ಸಂಕೇತ ಈ ಲಾಂಛನ.

## ವಿಜಯ ವಿಠ್ಠಲ ದೇವಸ್ಥಾನ

ಈ ಗುಡಿ ಹಂಪಿಯ ದೊಡ್ಡ ಅಕರ್ಷಣೆ. ವಿಶ್ವ ವಿಖ್ಯಾತ ಕಲ್ಲಿನ ರಥ ಇಲ್ಲಿದೆ. ವಿಜಯನಗರದ ಅರಸರು ಕಲಾಪ್ರೇಮಿಗಳಾಗಿದ್ದರು ಎಂಬುದಕ್ಕೆ ಈ ಗುಡಿಯೇ ಸಾಕ್ಷಿ. ಸುಂದರ ಶಿಲ್ಪಗಳೂ, ಸರಿಗಮ ಹಾಡುವ ಕಲ್ಲಿನ ಕಂಬಗಳೂ ಇಲ್ಲಿವೆ. ಇಲ್ಲಿನ ವಿಠ್ಠಲನೇ ಪುರಂದರ ದಾಸರ ಆರಾಧ್ಯ ದೈವ.

## ಲಕ್ಷ್ಮೀನರಸಿಂಹ

ಹಂಪಿಯಲ್ಲಿನ ಬಡವಿಲಿಂಗ, ಕಡಲೆ ಗಣಪ, ಲಕ್ಷ್ಮೀನರಸಿಂಹ ಮುಂತಾದ ವಿಗ್ರಹಗಳು ಭಾರೀ ಗಾತ್ರದವು. ಹಂಪಿಯ ಬಳಿ ಹೇರಳವಾಗಿ ಸಿಗುವ ಕಠಿಣವಾದ ಗ್ರಾನೈಟ್ ಶಿಲೆ ಸೂಕ್ಷ್ಮ ಕೆತ್ತನೆಗೆ ಯೋಗ್ಯವಲ್ಲದ್ದರಿಂದ ಇಲ್ಲೆಲ್ಲ ಬೃಹತ್ ವಿಗ್ರಹಗಳನ್ನೇ ಕೆತ್ತಲಾಗಿದೆ. ಲಕ್ಷ್ಮೀನರಸಿಂಹನ ಎಡ ಭುಜದ ಮೇಲೆ ದೇವಿಯ ಹಸ್ತವಿದೆ. ಅಂದರೆ ಮೊದಲಿದ್ದ ಲಕ್ಷ್ಮಿ ವಿಗ್ರಹ ಭಗ್ನವಾಗಿದೆ. ಬಳಿಕ ಇದಕ್ಕೆ ಉಗ್ರನರಸಿಂಹ ಎಂಬ ಹೆಸರು ರೂಢಿಗೆ ಬಂತು.

## ವಿಶ್ವ ಪರಂಪರೆಯ ತಾಣ

ಯುನೆಸ್ಕೊ ಎಂಬ ಸಂಸ್ಥೆಯು ವಿಶ್ವದ ಅನೇಕ ಮಹತ್ವದ ಸ್ಥಳಗಳನ್ನು ಗುರುತಿಸಿ ಅವು ಇಡೀ ಮನುಕುಲಕ್ಕೆ ಸೇರಿದ ಆಸ್ತಿ, ಅವುಗಳ ರಕ್ಷಣೆ ಹೊಣೆ ಎಲ್ಲರಿಗೂ ಸೇರಿದ್ದು ಎಂದು ಸಾರಿದೆ. ಇಂಥ ಸ್ಥಳಗಳಿಗೆ ವಿಶ್ವ ಪರಂಪರೆಯ ತಾಣ ಎಂದು ಕರೆಯುತ್ತಾರೆ. 1999ರಲ್ಲಿ ಇಂಥ 800 ಸ್ಮಾರಕಗಳನ್ನು ಗುರುತಿಸಲಾಗಿದ್ದು ಅವುಗಳಲ್ಲಿ ಭಾರತದ 26 ಸ್ಮಾರಕಗಳಿವೆ. ಹಂಪಿ ಆ ಪಟ್ಟಿಯಲ್ಲಿರುವುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿ.



## ಮಹಾ ಪರೇಡ್

ಪ್ರತಿವರ್ಷ ಜನವರಿ 26ನೇ ತಾರೀಖು ದಿಲ್ಲಿಯ ರಾಷ್ಟ್ರಪತಿ ಭವನದ ಎದುರು ಪರೇಡ್ ನಡೆಯುತ್ತದೆ ಅಲ್ಲವೆ? ಅಂಥದ್ದೇ ಪರೇಡ್ ಆ ಕಾಲದಲ್ಲಿ ಹಂಪಿಯ ಮಹಾನವಮಿ ದಿಬ್ಬದ ಬಳಿ ನಡೆಯುತ್ತಿತ್ತಂತೆ. ಅಶ್ವದಳ, ಗಜದಳ ಸೇರಿದಂತೆ ಸೈನ್ಯದ ಎಲ್ಲಾ ವಿಭಾಗಗಳ ಪಥಸಂಚಲನೆಯನ್ನು ಶ್ರೀಕೃಷ್ಣದೇವರಾಯ ಆ ದಿಬ್ಬದ ಮೇಲೆ ಕುಳಿತು ವೀಕ್ಷಿಸುತ್ತಿದ್ದನು.

## ಪ್ರೇಕ್ಷಣೀಯ ಸ್ಮಾರಕಗಳು

ಹಂಪಿಯ ಇನ್ನೂ ಕೆಲವು ಮುಖ್ಯ ಸ್ಮಾರಕಗಳೆಂದರೆ ವಿರೂಪಾಕ್ಷ ದೇವಾಲಯ, ಚಕ್ರತೀರ್ಥ, ಬಿಷ್ಟಪ್ಪಯ್ಯ ಗೋಪುರ, ಯಂತ್ರೋದ್ಧವ ಹನುಮಂತ, ಮಾಲ್ಯವಂತ ರಘುನಾಥ, ಕೋದಂಡರಾಮ, ಉದ್ದಾನೆ ವೀರಭದ್ರ, ಅನಂತಶಯನ ಗುಡಿ, ಸುಂದರ ಕಲ್ಯಾಣಿ, ಗಜಶಾಲೆ, ಕಮಲಮಹಲ್.

ಈ ಸಂಚಿಕೆ ಓದಿ ನಿಮಗೆ ಏನೆನ್ನಿಸಿತು? ಯಾವುದು ಇಷ್ಟವಾಯಿತು, ಯಾವುದು ಇಷ್ಟವಾಗಲಿಲ್ಲ? ಪತ್ರ ಬರೆದು ನಮಗೆ ತಿಳಿಸಿ. ವಿಳಾಸ ಇಲ್ಲಿದೆ.


ಅದಮ್ಯ ಚೇತನ
'ಅನ್ನಪೂರ್ಣ'
ಮಹಾನಗರಪಾಲಿಕೆ ಸಮುದಾಯ ಭವನ
ಗವಿಪುರ, ಬೆಂಗಳೂರು –19



ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

ಅದಮ್ಯ ಚೇತನ ಬೆಂಗಳೂರು

ಚಿಣ್ಣರ ಚೇತನ–ಶಾಲಾ ಮಕ್ಕಳ ಗೋಡೆ ಪತ್ರಿಕೆ. ಕರ್ನಾಟಕ ಸರ್ಕಾರ, ಸರ್ವಶಿಕ್ಷಣ ಅಭಿಯಾನ ಮತ್ತು ಅದಮ್ಯ ಚೇತನ ಸಂಸ್ಥೆ– ಇವರ ಸಹಭಾಗಿತ್ವದಲ್ಲಿ ಪ್ರಕಾಶಿಸಿದೆ.



© ಹಕ್ಕುಗಳನ್ನು ಕಾದಿರಿಸಲಾಗಿದೆ



ಸರ್ವ ಶಿಕ್ಷಣ ಅಭಿಯಾನ ಮಿಷನ್
ಬೆಂಗಳೂರು